**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ಸದಸ್ಯರ ಹೆಸರು: ಶ್ರೀ ಐವಾನ್ ಡಿ ಸೋಜಾ**

**ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆ**

**ಸೂಚನೆ:** ಕರ್ನಾಟಕ ರಾಜ್ಯದಲ್ಲಿರುವ ವಿಶೇಷ ಚೇತನರಿಗೆ ನೀಡುವ ಮಾಸಿಕ ಭತ್ಯೆಯು ಇತರ ರಾಜ್ಯಗಳಿಗೆ ಹೋಲಿಸಿದಾಗ ಅತ್ಯಂತ ಕಡಿಮೆ ಆಗಿದ್ದು, ಇದನ್ನು ಕನಿಷ್ಠ ರೂ.3,000/-ಕ್ಕೆ ಹೆಚ್ಚಿಸಬೇಕೆಂದು ಹಾಗೂ ವಿಶೇಷ ಚೇತನರಿಗೆ ನೀಡುವ ಸೌಲಭ್ಯದ ಆದಾಯದ ಮಿತಿಯನ್ನು ರದ್ದುಗೊಳಿಸಿ, ಶೇಕಡಾ 40% ಕ್ಕಿಂತ ಹೆಚ್ಚಿಸಿ ಅಂಗವಿಕಲರಿಗೆ ಯಾವುದೇ ತಾರತಮ್ಯ ಮಾಡದೇ ವಿಶೇಷ ಚೇತನರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿ ಕೊಡಬೇಕೆಂಬ ಬೇಡಿಕೆಯನ್ನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ

**ಉತ್ತರ**

ರಾಜ್ಯದಲ್ಲಿ ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಪಿಂಚಣಿ ಮಂಜೂರಾತಿ ಮಾನದಂಡಗಳನ್ವಯ ಈ ಕೆಳಗಿನಂತೆ ಅಂಗವಿಕಲ ಮಾಸಿಕ ಪಿಂಚಣಿಯನ್ನು ವಿತರಿಸಲಾಗುತ್ತಿದೆ.

| ಕ್ರಮ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ ದಿನಾಂಕ | ಶೇಕಡವಾರು ಅಂಗವಿಕಲತೆ ವಿಧ | ಮಾಸಿಕ ಪಿಂಚಣಿ ಮೊತ್ತ |
|---|---|---|---|
| 1 | ಕಂಇ 39 ಎಂ.ಎಸ್.ಟಿ 2021 ದಿನಾಂಕ:31.07.2021 | ಶೇ. 40 ರಿಂದ 74 ರಷ್ಟು ಅಂಗವಿಕಲತೆ (PHP-1) | ರೂ.800/- |
| 2 | ಆರ್.ಡಿ 47 ಡಿ.ಎಸ್.ಪಿ 2018 ದಿನಾಂಕ:16.03.2018 | ಶೇ. 75ಕ್ಕಿಂತ ಹೆಚ್ಚಿನ ಅಂಗಕಲತೆ (PHP-2) | ರೂ.1,400/- |
| 3 | ಡಿ.ಎಸ್. ಎಸ್.ಪಿ/ ಎಸ್. ಎಸ್.ಪಿ/ಪಿ.ಹೆಚ್.ಪಿ/5/2021 ದಿನಾಂಕ:07.12.2021 | ಶೇ. 75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ (PHP-3) | ರೂ.2,000/- |

ವಿಕಲಚೇತನರಿಗೆ ನೀಡುತ್ತಿರುವ ಮಾಸಿಕ ಪಿಂಚಣಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಬಿ.ಪಿ.ಎಲ್ ಪಡಿತರ ಚೀಟಿ ಪಡೆಯಲು ಆದಾಯ ಮಿತಿಯನ್ನು ರೂ.1.20 ಲಕ್ಷಗಳಿಗೆ ಹೆಚ್ಚಿಸಲಾಗಿರುವ ವಿಷಯವನ್ನು ದಿನಾಂಕ: 25-11-2020 ರಂದು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಸರ್ಕಾರದಿಂದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ನೈಜ ಹಾಗೂ ವಸ್ತುನಿಷ್ಠ ಸ್ವರೂಪವನ್ನಾಗಿಸುವಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಆದಾಯ ಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಡಿಎಸ್ಎಸ್‌ಪಿ/ಎಂಐಎಸ್‌ಸಿ-05/2020, ದಿ-10-02-2021ರಲ್ಲಿ ರೂ.32,000/-ಗಳಿಗೆ ನಿಗದಿಪಡಿಸಲಾಗಿದೆ. ಅದರಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹ ಫಲಾನುಭವಿಗಳಿಂದ ಪಿಂಚಣಿಗೆ ಅರ್ಜಿ ಪಡೆಯಲು ಕ್ರಮವಹಿಸಲಾಗುತ್ತಿದೆ.

ಕಡತ ಸಂಖ್ಯೆ:ಆರ್‌ಡಿ/395/ ಕೆ.ಎ.ಟಿ./ಎಸ್.ಎಸ್.ಪಿ. 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು